ಎಂ.ವಿ.ಸಿ. ನಂಃ 400/2024
ಪಿ.ಡಬ್ಲ್ಯು-1 (ಶರಣಬಸಪ್ಪ)

ದಿನಾಂಕ: 23-03-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀಸವಾಲುಃ ಶ್ರೀ.ಎಮ್.ಎಮ್.ಟಿ. 2ನೇ ಎದುರುದಾರ ಪರ ವಕೀಲರಿಂದಃ**

ಈ ಅಪಘಾತವು ದಿಃ 21/09/2023 ರಂದು ಆಗಿರುತ್ತದೆ. ಆ ದಿವಸ ನಾನು ಬೆಂಗಳೂರಿನಿಂದ ತುಮಕೂರಿಗೆ ಮೋಟರ ಸೈಕಲ ಮೇಲೆ ಹೋಗುತ್ತಿದ್ದೆ. ಸದರಿ ಮೋಟರ ಸೈಕಲನಲ್ಲಿ ನಾನು ಹಿಂಬದಿ ಸವಾರನಾಗಿದ್ದೆ ವೀರಭದ್ರಪ್ಪ ಎನ್ನುವವರು ಮೋಟರ ಸೈಕಲ ಚಾಲನೆ ಮಾಡುತ್ತಿದ್ದರು. ಈ ಅಪಘಾತ ಆದಾಗ ರಾತ್ರಿ 09.40ಗಂಟೆ ಆಗಿತ್ತು. ನಾನು ಹಿಂಬದಿ ಸವಾರನಾಗಿ ಹೋಗುತ್ತಿದ್ದ ಮೋಟರ ಸೈಕಲನ ನಂಬರ KA-06/HA-4174. ಸದರಿ ಮೋಟರ ಸೈಕಲ ಚಾಲನೆ ಮಾಡುತ್ತಿದ್ದ ವೀರಭದ್ರಪ್ಪ ಇವರಿಗೆ ಮೋಟರ ಸೈಕಲ ಚಾಲನೆ ಮಾಡಲು ಚಾಲನಾ ಪತ್ರ ಇತ್ತು, ಅದನ್ನು ನಾನು ಹಾಜರಪಡಿಸಿರುತ್ತೇನೆ. ಅಪಘಾತ ಆದ ಸಮಯದಲ್ಲಿ ನಾನು ಮತ್ತು ಮೋಟರ ಸೈಕಲ ಚಾಲನೆ ಮಾಡುತ್ತಿದ್ದ ವೀರಭದ್ರಪ್ಪ ಇವರು ಹೆಲ್ಮೆಟ್ ಹಾಕಿಕೊಂಡಿದ್ದೆವು. ಹೆಲ್ಮೆಟ್ ಹಾಕಿಕೊಳ್ಳದಿದ್ದರೂ ಸಹ ಹಾಕಿಕೊಂಡಿದ್ದೆವು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

2. ನಮ್ಮ ಮೋಟರ ಸೈಕಲಗೆ ಟ್ರಕ ನಂ.TN-50/AX-9384 ಅಪಘಾತಪಡಿಸಿರುತ್ತದೆ. ಸದರಿ ಟ್ರಕ್ ಸಹ ಬೆಂಗಳೂರಿನಿಂದ ತುಮಕೂರು ಕಡೆಗೆ ಹೋಗುತ್ತಿತ್ತು. ಸದರಿ ಟ್ರಕ್ಕ ನಮ್ಮ ಮೋಟರ ಸೈಕಲನ ಹಿಂದಿನಿಂದ

ಬರುತ್ತಿತ್ತು. ಸದರಿ ಟ್ರಕ್ ನಮ್ಮ ಮೋಟರ ಸೈಕಲಗೆ ಹಿಂದಿನಿಂದ ಅಪಘಾತ ಪಡಿಸಿರುತ್ತದೆ. ಈ ಅಪಘಾತದಲ್ಲಿ ನನ್ನ ಎಡಗಾಲಿಗೆ ಮತ್ತು ಎಡಕೈಗೆ ಗಾಯಗಳಾಗಿರುತ್ತವೆ. ಮೋಟರ ಸೈಕಲ ಚಾಲನೆ ಮಾಡುತ್ತಿದ್ದ ವೀರಭದ್ರಪ್ಪ ಇವರಿಗೆ ಬಲಗೈಗೆ ಪೆಟ್ಟಾಗಿರುತ್ತದೆ. ಈ ಅಪಘಾತದಲ್ಲಿ ನಮ್ಮ ಮೋಟರ ಸೈಕಲಗೆ ಏನೇನು ಜಖಂಗಳಾಗಿವೆ ಎಂದು ನಾನು ನೋಡಿಲ್ಲ. ಮೋಟರ ಸೈಕಲ ಚಾಲನೆ ಮಾಡುತ್ತಿದ್ದ ವೀರಭದ್ರಪ್ಪ ಇವರಿಗೆ ಮೋಟರ ಸೈಕಲ ಚಾಲನೆ ಮಾಡಲು ಚಾಲನಾ ಪತ್ರ ಇರಲಿಲ್ಲ, ಅವರಿಗೆ ಮೋಟರ ಸೈಕಲ ಚಾಲನೆ ಮಾಡಲು ಬರುತ್ತಿರಲಿಲ್ಲ ಆದ್ದರಿಂದ ವೀರಭದ್ರಪ್ಪ ಇವರ ನಿರ್ಲಕ್ಷತನದಿಂದ ನಾವು ಮೋಟರ ಸೈಕಲ ಮೇಲಿಂದ ಬಿದ್ದು ಗಾಯಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ.

3.ಈ ಅಪಘಾತದ ವಿಚಾರವಾಗಿ ವೀರಭದ್ರಪ್ಪ ಇವರು ದೂರು ಕೊಟ್ಟಿರುತ್ತಾರೆ. ಅಪಘಾತ ಆದ ಮಾರನೇಯ ದಿನ ಬೆಳಿಗ್ಗೆ ನೆಲಮಂಗಲ ಪೊಲೀಸ ಠಾಣೆಯಲ್ಲಿ ದೂರು ಕೊಟ್ಟಿರುತ್ತಾರೆ. ಅಪಘಾತ ಆದ ನಂತರ ನಮ್ಮನ್ನು ನೆಲಮಂಗಲದ ಕೇರ್-ಏಷಿಯಾ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ಅದೇ ದಿನ ರಾತ್ರಿ ನನ್ನನ್ನು ಎಂ.ಕ್ಯೂ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ಸದರಿ ಎಂ.ಕ್ಯೂ ಆಸ್ಪತ್ರೆಯಲ್ಲಿ ನಾನು 03 ತಿಂಗಳು ಚಿಕಿತ್ಸೆ ಪಡೆದಿರುತ್ತೇನೆ. ಎಂ.ಕ್ಯೂ ಆಸ್ಪತ್ರೆಯಲ್ಲಿ 03 ತಿಂಗಳು ಚಿಕಿತ್ಸೆ ಪಡೆದಿದ್ದೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

4. ಈ ಅಪಘಾತವು ಮೋಟರ ಸೈಕಲ ಚಾಲನೆ ಮಾಡುತ್ತಿದ್ದ ವೀರಭದ್ರಪ್ಪ ಇವರ ನಿರ್ಲಕ್ಷತನದಿಂದ ಸಂಭವಿಸಿದ್ದರೂ ಸಹ ಟ್ರಕ್ ಚಾಲಕನ ಮೇಲೆ ಸುಳ್ಳು ದೂರು ಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ. 2ನೇ ಎದುರುದಾರರಿಂದ ಪರಿಹಾರ ಪಡೆಯುವ ಉದ್ದೇಶದಿಂದ ನಾವು ಮತ್ತು ಪೊಲೀಸರು ಶಾಮೀಲಾಗಿ ಟ್ರಕ್ ಚಾಲಕನ ಮೇಲೆ ಸುಳ್ಳು ಪ್ರಕರಣ ದಾಖಲಿಸಿದ್ದೇವೆ ಎಂದರೆ ಸರಿಯಲ್ಲ.

5. ನಾನು ಗೋಟ್-ಫಾರ್ಮ ಮತ್ತು ವ್ಯವಸಾಯ ಮಾಡುತ್ತೇನೆ ಎಂದು ತೋರಿಸಲು ದಾಖಲೆಗಳನ್ನು ಹಾಜರ ಮಾಡಿಲ್ಲ. ನನ್ನ ಹೆಸರಿನಲ್ಲಿ ಜಮೀನು ಇರುವುದಿಲ್ಲ. ತಿಂಗಳಿಗೆ ನನಗೆ ರೂ.30,000/- ಆದಾಯ ಬರುತ್ತದೆ ಎಂದು ತೋರಿಸಲು ಯಾವುದೇ ದಾಖಲೆ ಹಾಜರ ಮಾಡಿಲ್ಲ. ನನ್ನ ಚಿಕಿತ್ಸೆಗೆ ರೂ.10,00,000/- ಕ್ಕಿಂತ ಹೆಚ್ಚಿಗೆ ಖರ್ಚು ಆಗಿದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

6. ನಾನು ನನ್ನ ಶಾಲೆಯ ಸರ್ಟಿಫಿಕೇಟನ್ನು ಹಾಜರ ಮಾಡಿಲ್ಲ. ನನ್ನ ಶಾಲಾ ದಾಖಲೆಗಳ ಆಧಾರದ ಮೇಲೆ ಅಪಘಾತ ಆದಾಗ ನನಗೆ 32 ವರ್ಷ ವಯಸ್ಸಾಗಿತ್ತು ಎಂದು ಬರೆಯಿಸಿರುತ್ತೇನೆ. ನನಗೆ 40 ವರ್ಷಕ್ಕಿಂತ ಹೆಚ್ಚಿಗೆ ವಯಸ್ಸಾಗಿದ್ದರೂ ಸಹ 32 ವರ್ಷ ವಯಸ್ಸಾಗಿದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹಾಜರಪಡಿಸಿರುವ ದಾಖಲೆಗಳೆಲ್ಲವೂ ಸೃಷ್ಟಿ ಮಾಡಿಕೊಂಡಂತಹ ದಾಖಲೆಗಳು ಎಂದರೆ ಸರಿಯಲ್ಲ.

ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರುವಿಚಾರಣೆಃ</u>** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಪ್ರಕಾರ ಬೆರಳಚ್ಚು ಮಾಡಲಾಗಿದೆ)

ಓ ಹೇ ಕೇ ಸರಿ ಇದೆ.

(ಉಮೇಶ ಎಸ್. ಅತನೂರೆ)
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಗೋಕಾಕ.

ಸಾಕ್ಷಿಯ ಸಹಿ